# ಪ್ರಾರ್ಥನೆ

# ಶ್ರೀ ಗಣೇಶ ಭುಜಂಗ ಸ್ತೋತ್ರದಿಂದ

**ಪ್ರಕಾಶತ್ ಜಪಾರಕ್ತ ರತ್ನ ಪ್ರಸೂನ**
**ಪ್ರವಾಲ ಪ್ರಭಾತಾರುಣ ಜ್ಯೋತಿರೇಕಮ್ ।**
**ಪ್ರಲಂಬೋದರಂ ವಕ್ರತುಂಡೈಕದಂತಂ**
**ಗಣಾಧೀಶಮೀಶಾನಸೂನುಂ ತಮೀಡೇ ॥೧॥**

ಕೆಂಪು ರತ್ನದಂತೆ ಕಾಂತಿಯುಳ್ಳ ದಾಸವಾಳದ ಹೂವಿನಂತಿರುವ, ಸೂರ್ಯೋದಯದ ಸಮಯದ ಹವಳದ ಕಾಂತಿಯಿಂದ ಬೆಳಗುವ, ಜ್ಯೋತಿರೂಪನಾದ, ತೂಗಾಡುವ ವಿಶಾಲ ಉದರವುಳ್ಳ, ವಕ್ರತುಂಡನೂ ಏಕದಂತನೂ ಆದ, ಗಣಗಳ ಅಧಿಪತಿಯಾದ, ಈಶ್ವರಪುತ್ರನಾದ ಗಣೇಶನನ್ನು ಸ್ತುತಿಸುತ್ತೇನೆ.



**ಯಮೇಕಾಕ್ಷರಂ ನಿರ್ಮಲಂ ನಿರ್ವಿಕಲ್ಪಂ**
**ಗುಣಾತೀತಮಾನಂದಮಾಕಾರ ಶೂನ್ಯಮ್ ।**
**ಪರಂ ಪಾರಮೋಂಕಾರಮಾಮ್ನಾಯ ಗರ್ಭಂ**
**ವದಂತಿ ಪ್ರಗಲ್ಭಂ ಪುರಾಣಂ ತಮೀಡೇ ॥**

ಯಾರನ್ನು ಏಕಾಕ್ಷರ ಸ್ವರೂಪಿ, ವಿಭಿನ್ನತೆಗಳಿಲ್ಲದವನು, ಗುಣಗಳಿಗೆ ಅತೀತನು, ಆನಂದ ಸ್ವರೂಪಿ, ಆಕಾರರಹಿತನು, ಸಕಲ ವೇದಗಳನ್ನೂ ಒಳಗೊಳ್ಳುವ ಓಂಕಾರ, ಹಾಗೂ ಅಂತಿಮ ನೆಲೆ ಎಂದು ಹೇಳುವರೋ ಅಂತಹ ಜ್ಞಾನಸ್ವರೂಪಿ ಯಾದ, ಪುರಾತನನಾದ ಗಣೇಶನನ್ನು ಸ್ತುತಿಸು ತ್ತೇನೆ.

**ಸ್ಫುರತ್ ನಿಷ್ಠುರಾಲೋಲಪಿಂಗಾಕ್ಷಿ ತಾರಂ**
**ಕೃಪಾಕೋಮಲೋದಾರಲೀಲಾವತಾರಮ್ ।**
**ಕಲಾಬಿಂದುಗಂ ಗೀಯತೇ ಯೋಗಿವರ್ಯೈ**
**ರ್ಗಣಾಧೀಶಮೀಶಾನಸೂನುಂ ತಮೀಡೇ ॥ ೨ ॥**

ಕಂಪಿಸುವ, ಕಠೋರವೂ ಚಂಚಲವೂ ಆದ ಕೆಂಪು ಕಣ್ಣುಗಳುಳ್ಳ, ಅದೇ ರೀತಿ ಕರುಣೆಯಿಂದ ಕೋಮಲ ಭಾವವನ್ನು ಹೊಂದಿ ಲೀಲಾವತಾರವನ್ನೆತ್ತಿದ, ಕಲಾ ಮತ್ತು ಬಿಂದುಸ್ಥಾನಗಳಲ್ಲಿ ನೆಲೆಸಿರುವ, ಶ್ರೇಷ್ಠ ಯೋಗಿಗಳಿಂದ ಸ್ತುತಿಸಲ್ಪಟ್ಟ, ಗಣಗಳ ಅಧಿಪತಿಯಾದ, ಈಶ್ವರಪುತ್ರನಾದ ಗಣೇಶನನ್ನು ಸ್ತುತಿಸುತ್ತೇನೆ.

**ಚಿದಾನಂದಸಾಂದ್ರಾಯ ಶಾಂತಾಯ ತುಭ್ಯಂ**
**ನಮೋ ವಿಶ್ವಕರ್ತ್ರೇ ಚ ಹರ್ತ್ರೇ ಚ ತುಭ್ಯಮ್ ।**
**ನಮೋಽನಂತಲೀಲಾಯ ಕೈವಲ್ಯಭಾಸೇ**
**ನಮೋ ವಿಶ್ವಬೀಜ ಪ್ರಸೀದೇಶಸೂನೋ ॥ ೪ ॥**

ಚಿದಾನಂದಘನನಾದ, ಶಾಂತನಾದ, ವಿಶ್ವವನ್ನು ರಚಿಸುವ ಮತ್ತು ಲಯಗೊಳಿಸುವ ನಿನಗೆ ನಮಸ್ಕಾರ. ಅನಂತಲೀಲಾ ಸ್ವರೂಪಿಯಾದ ನಿನಗೆ ನಮಸ್ಕಾರ. ಕೈವಲ್ಯಭಾವದಿಂದ ಪ್ರಕಾಶಿಸುವ, ವಿಶ್ವಕ್ಕೆ ಮೂಲಕಾರಣನಾದ ನಿನಗೆ ನಮಸ್ಕಾರ. ಈಶ್ವರಪುತ್ರನೆ! ಪ್ರಸನ್ನನಾಗು.

— ಶ್ರೀಶಂಕರಾಚಾರ್ಯ

## ಸೂಕ್ತಿಪ್ರಭ

ಸೇವೆ ಮಾಡುವವನು ಮುಕ್ತಿಯ ಮಾರ್ಗವನ್ನು ಕಂಡುಕೊಂಡಿರುತ್ತಾನೆ. ಅವನು ಗಿಡವೊಂದನ್ನು ನೆಟ್ಟು, ಕೆಲವು ವರ್ಷಗಳಾದ ಮೇಲೆ ನೆರಳು, ಹೂ, ಹಣ್ಣುಗಳನ್ನು ಪಡೆಯುವ ವ್ಯಕ್ತಿಯಂತೆ. ಸೇವಾಕಾರ್ಯದ ಫಲ ಇದೇ ರೀತಿ. ಸಹಾಯದ ಅಗತ್ಯವಿದ್ದವರಿಗೆ ಸಹಾಯ ಮಾಡುವವನ ಆನಂದ ಇದೇ ರೀತಿ. ಶ್ರೇಷ್ಠವಾದ ನಿರ್ವಾಣವೂ ಇದೇ ರೀತಿ.

— ಭಗವಾನ್ ಬುದ್ಧ

ದುರ್ಬಲನನ್ನು ಹಿಂಸಿಸಬೇಡ. ಜೀವವಿಲ್ಲದ ಕೊಳವೆಯ ಮೂಲಕ ಗಾಳಿ ಊದಿದರೂ, ಅದು ಕಬ್ಬಿಣವನ್ನೇ ಸುಟ್ಟು ಬೂದಿ ಮಾಡುವುದು.

— ಕಬೀರ

ಬರಿ ಬಾಯಿಮಾತಿನ ಮೂಲಕ ಸ್ನೇಹವನ್ನು ತೋರಿಸಬೇಡ. ದಾರಿಯಲ್ಲಿ ನಿನಗೆ ಎದುರಾಗುವವನ ಮೇಲೆ ನಿನಗೆ ಪ್ರೀತಿ, ಕರುಣೆಗಳು ಉಕ್ಕಿ ಬಂದು, ನಿನ್ನ ಹೃದಯ ಹೊತ್ತಿ ಉರಿಯಲಿ.

— ಬಹಾಉಲ್ಲಾ *(ಬಹಾಯಿ ಪಂಥದ ಸ್ಥಾಪಕ)*

ಅಜ್ಞಾನದಿಂದ ತೊಳಲುತ್ತಿರುವ ಮೂಢರು, ತಾವೇ ಬುದ್ಧಿವಂತರು, ಪಂಡಿತರು ಎಂದು ತಿಳಿಯುವರು. ವಕ್ರಗತಿಯಲ್ಲಿ ನಡೆಯುತ್ತಾ ಅವರು ಕುರುಡನು ಇನ್ನೊಬ್ಬ ಕುರುಡನಿಗೆ ದಾರಿ ತೋರಿಸುವಂತೆ ಸುತ್ತುತ್ತಿರುವರು.

— ಕಠೋಪನಿಷತ್

ಮಾನವನನ್ನು ದೈವದೊಂದಿಗೆ ಜೋಡಿಸುವ ಒಂದೇ ಒಂದು ಗುಣವೆಂದರೆ – ಪ್ರಾಮಾಣಿಕತೆ.

— ಸೆಂಗೆ ತಾಕತೊಮಿ *(ಜಪಾನೀ ಶಿಂಟೋ ಚಿಂತಕ)*